## ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್‌ಸಿ.
## ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ **968 /2021**

**ಚಾಸಾ ಃ- 13 / ಪ್ರಾಸಾ ಃ- 07**

| | |
|---|---|
| ಹೆಸರು | ವೆಂಕಟೇಶ ಟಿ |
| ತಂದೆ ಹೆಸರು | ತಿಮ್ಮೇಗೌಡ |
| ವಯಸ್ಸು | 51 |
| ಉದ್ಯೋಗ | ಸಬ್ ಇನ್ಸ್ ಪೆಕ್ಟರ್ , ಬಿಎಂ ಟಿ ಎಫ್ , ಬೆಂಗಳುರು |
| ವಿಳಾಸ | ನಂದಿನಿ ಲೇಔಟ್ , ಬೆಂಗಳೂರು |

**ದಿನಾಂಕಃ 08.10.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಜೂನ್ ?2019 ರಿಂದ ನವೆಂಬರ್ 2020 ರವರೆಗೆ ಮಾಗಡಿ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಎಂದು ಕೆಲಸ ನಿರ್ವಹಿಸಿದ್ದೇನೆ.

ದಿನಾಂಕ 04.05.2020 ರಂದು ಸಂಜೆ 4.00 ಗಂಟೆಗೆ ಚಾಸಾ-1 ರವರು ಟೈಪ್ ಮಾಡಿದ ದೂರನ್ನು ಸಲ್ಲಿಸಿದ ಮೇರೆಗೆ ಠಾಣಾ ಮೊಕದ್ದಮೆ ಸಂಖೆ 79/2020 ಕಲಂ 143, 353, 504, 506 ಸಹಕಲಂ 149 ಐಪಿಸಿ ಅಡಿ ಪ್ರಥಮ ವರ್ತಮಾನ ವರಧಿಯನ್ನು ದಾಖಲಿಸಿಕೊಂಡಿರುತ್ತೇನೆ ಹಾಗೂ ಪಿಸಿ 111 ಲೋಹಿತ್ ರವರ ಮುಖಾಂತರ ಮಾನ್ಯ ನ್ಯಾಯಾಲಯಕ್ಕೆ ಪ್ರಥಮ ವರ್ತಮಾನದ ಪ್ರತಿಯನ್ನು ಕಳುಹಿಸಿಕೊಟ್ಟಿರುತ್ತೇನೆ ಹಾಗೂ ಮತ್ತೊಂದು ಪ್ರತಿಯನ್ನು ಮೇಲಾಧಿಕಾರಿಗಳಿಗೆ ಮೇಲ್ ಮಾಡಿರುತ್ತೇನೆ. ಈಗ ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ದೂರನ್ನು ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಪ್ರಥಮ ವರ್ತಮಾನ ವರಧಿಯನ್ನು

ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಪ್ರಥಮ ವರ್ತಮಾನ ವರದಿಯನ್ನು ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

ನಂತರ ಅದೇ ದಿವಸ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಚಾಸಾ-2, 10 ಮತ್ತು 11 ರವರ ಸಮಕ್ಷಮ ಸಂಜೆ 5.00 ರಿಂದ 5.30 ಗಂಟೆಯವರೆಗೆ ಕೃತ್ಯ ಸ್ಥಳದ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಈಗ ಸಾಕ್ಷಿಗೆ ಕೃತ್ಯಸ್ಥಳದ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಮಹಜರನ್ನು ನಿಪಿ-7 ಎಂದು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ನಂತರ ಅದೇ ದಿವಸ ಸಂಜೆ 6.15 ಗಂಟೆಗೆ 4 ರಿಂದ 6 ನೇ ಆರೋಪಿಗಳು ಠಾಣೆಗೆ ಹಾಜರಾಗಿದ್ದು ವಿಚಾರಣೆ ಮಾಡಿ ದಸ್ತಗಿರಿ ಕ್ರಮಗಳನ್ನು ಪಾಲಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

ದಿನಾಂಕ 07.05.2020 ರಂದು ಚಾಸಾ- 2 ರಿಂದ 9 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ದಿನಾಂಕ 20.08.2020 ರಂದು ಚಾಸಾ-1 ರವರ ಕರ್ತವ್ಯ ಧೃಡೀಕರಣ ಪತ್ರ ನೀಡುವಂತೆ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣ ಪಂಚಾಯತ್ ರಾಜ್ ಇಲಾಖೆ ರವರಿಗೆ ಮನವಿ ಪತ್ರ ನೀಡಿರುತ್ತೇನೆ.

ದಿನಾಂಕ 23.11.2020 ರಂದು ನಾನು ಮಾಗಡಿ ಪೋಲಿಸ್ ಠಾಣೆಯಿಂದ ವರ್ಗಾವಣೆ ಆದ ಕಾರಣ ಪ್ರಕರಣದ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-14 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ 1 ರಿಂದ 3 ಮತ್ತು 5 ನೇ ಆರೋಪಿಯು ನ್ಯಾಯಾಲಯದಲ್ಲಿ ಹಾಜರಿರುವುದನ್ನು ನೋಡಿ ಗುರುತಿಸುತ್ತಾರೆ. 4 ಮತ್ತು 6 ನೇ ಆರೋಪಿಯ ಗುರುತಿಸುವಿಕೆಗಾಗಿ ಆರೋಪಿ ಪರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ.

**ಪಾಟೀ ಸವಾಲು ಃ- ಶ್ರೀ. ಆರ್ ಎಸ್** ವಕೀಲರಿಂದ **ಆರೋಪಿ** ಪರವಾಗಿ ಃ-

ಪ್ರಥಮ ವರ್ತಮಾನ ವರಧಿಯ ಕಾಲಂ ನಂ .12 ರಲ್ಲಿ ಪಿರ್ಯಾದುದಾರರ ಸಹಿಯನ್ನು ಪಡೆದಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪಿರ್ಯಾದುದಾರರು ಆ ಸಂದರ್ಭದಲ್ಲಿ ಮಾಗಡಿ ವಿದಾನಸಭಾ ಕ್ಷೇತ್ರದ ಶಾಸಕರಾಗಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದಿನದಂದು ಪಿರ್ಯಾದುದಾರರು ಠಾಣೆಗೆ ಹಾಜರಾಗಿರುವುದಿಲ್ಲ, ಪಿರ್ಯಾದುದಾರರು ಅಂದು ಶಾಶಕರಾರಿದ್ದರಿಂದ ಅವರ ಒತ್ತಡಕ್ಕೆ ಮಣಿದು ಸುಳ್ಳು ಪ್ರಥಮ ವರ್ತಮಾನ ವರಧಿಯನ್ನು ದಾಖಲಿಸಿಕೊಂಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಅದೇ ರೀತಿ ನೀವು ಕೃತ್ಯ ಸ್ಥ,ಳಕ್ಕೆ ಹೋಗಿ ಪಂಚರ ಸಮಕ್ಷಮ ಯಾವುದೇ ಮಹಜರು ಕ್ರಮವನ್ನು ಜರುಗಿಸಿರುವುದಿಲ್ಲ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ರಾಜಕೀಯ ಒತ್ತಡಕ್ಕೆ ಮಣಿದು ಮಹಜರನ್ನು ಸಹ ನಿಮ್ಮ ಠಾಣೆಯಲ್ಲೆ ಸೃಷ್ಟಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಚಾಸಾ-1 ರವರ ಹಿಂಬಾಲಕರು ಕೊಟ್ಟ ಮಾಹಿತಿ ಮೇರೆಗೆ ಒಂದು ಸುಳ್ಳು ಹೇಳಿಕೆಯನ್ನು ಸೃಷ್ಟಿಸಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**